ಎರಡು ತಿಂಗಳಾತು, ಕಾಳವ್ವ ಹೊರಗಡೆ ಕುಂದರಲಿಲ್ಲ. ಅತ್ತಿಗೆ ಖಚಿತ ಆತು. ಸೊಸೆಗೆ ಸೆರಗು ನಿಂತೇತಿ. ಅಂತೇಳಿ ಆಕೀಗೆ ಮನದಾಗ ಖುಷಿ. ದೇವರು ಕೊನಿಗೂ ಕಣ್ ಬಿಟ್ಟ ಎಂದು ನಿಟ್ಟುಸಿರಿಟ್ಟಳು. ದೇವರು ದೊಡ್ಡೋನು ಅಂತೆಲ್ಲ ಹಾಡಿ ದೇವರನ್ನ ಹೊಗಳಿದ್ಲು. ನಾಕು ತಿಂಗಳಿಗೆ ಚಾಜ ಮಾಡಿ ಉಡಿ ತುಂಬಿ ಗುಡಿಗೆ ಕಳ್ಸಿ ಕೊಟ್ಲು. ಹಿಂಗ ಊರಾಗ ನಾಲ್ಕೈದು ಹೆಣ್ಣು ಮಕ್ಕಳು ಪೂಜಾರೆಪ್ಪನ ಮೈ ಮೇಲೆ ಬರೋ ದೇವರ ಮಾತು ಕೇಳಿ ಬಿದಿರುಮೆಳೆ ಸೇವೆ ಹರಕೆ ಕಟ್ಕೊಂಡು ಮಕ್ಳು ಆಗೊ ಭಾಗ್ಯ ಪಡೆದುಕೊಂಡಿದ್ರು.

ಒಂದು ದಿನ ಪೂಜಾರೆಪ್ಪನ ತಂಗಿ ಸೌಭಾಗ್ಯಮ್ಮ ಅಳ್ತಾ ಊರ ದಾರಿ ಹಿಡಿದಿದ್ಲು. ಈ ಹೆಣ್ ಮಕ್ಳು ಬದುಕಿನ್ಯಾಗ ಜಗಳ ಎದಕ್ಕ ಆಕ್ಕೇತಿ? ಒಂದು ವರದಕ್ಷಿಣೆಗೆ, ಇನ್ನೊಂದು ಮಕ್ಕಳಾಗಿಲ್ಲ ಅಂತ. 'ಕಾಳವ್ವ ನನ್ನ ಮದ್ವೆ ಆಗಿ ಎಂಟು ವರ್ಷ ಆಯ್ತು. ಮಕ್ಕಳಾಗಿಲ್ಲ ಅಂತ ದಿನಾ ಜಗಳ ಮನೇಲಿ. ಅತ್ತಿ ಬೈತಾಳ. ಅಕ್ಕ-ಪಕ್ಕದ ಮನೆಯವರು ಯಾವುದಕ್ಕೂ ಕರಿಯಲ್ಲ. ನನ್ಗ ಈ ಬದುಕೆ ಬ್ಯಾಡಾಗೇತಿ' ಅಂತ ಅಳ್ತಾಳ.

'ಅಯ್ಯ ಸೌಭಾಗ್ಯಮ್ಮ ಹೀಂಗೆಲ್ಲ ಕಣ್ಣೀರಾಕಬ್ಯಾಡ ತಾಯಿ. ನನ್ಗೂ ಮದ್ವಿ ಆಗಿ ಹದಿಮೂರು ವರ್ಷದ ತನಕ ಮಕ್ಕಳು ಆಗಿದ್ದಿಲ್ಲ. ಒಂದು ದಿನ ಪೂಜಾರೆಪ್ಪನ ಮೈಮ್ಯಾಲೆ ದೇವರು ಬಂದು ಗುಡ್ಡದ ಮ್ಯಾಲಿರೋ ದೇವಸ್ಥಾನಕ್ಕೆ ಅಮವಾಸಿ ದಿನ ಬಿದಿರುಮೆಳೆ ಸೇವೆ ಹರಕೆ ಕಟ್ಕೊಳ್ಳಕೆ ಹೇಳಿದ್ರು. ಅದರಂಗೆ ಹರಕೆ ಕಟ್ಕೊಂಡೆ ನನ್ಗೆ ಈಗ ಎಂಟು ತಿಂಗಳು, ನೋಡು ಈಗ ಪೂಜಾರೆಪ್ಪನ ದೇವರು ಊರವರಿಗೆಲ್ಲಾ ಒಳ್ಳೇದು ಮಾಡಿದಾನೆ, ಇನ್ನೂ ನೀನು ಪೂಜಾರೆಪ್ಪನ ತಂಗಿ. ನಿನಗೆ ಒಳ್ಳೇದು ಮಾಡಲ್ವೆ? ಬಾ ಪೂಜಾರೆಪ್ಪನ ದೇವರು ಕೇಳಿ ಹರಕೆ ಕಟ್ಟಿದ್ರಾಯ್ತು' ಅಂತ ಹೇಳಿ ಈಗ ಮನಿಗೋಗೊನು ಅಂತ ಸೌಭಾಗ್ಯಮ್ಮನ್ನ ಕರ್ಕೊಂಡು ಕಾಳವ್ವ ಮನಿಗೆ ಬಿಡಾಕೆ ಹೋದಂಗೆ ದಾರಿಲಿ ಒಂದಿಷ್ಟು ಹೆಣ್ಣುಮಕ್ಕಳು ಜೊತೆ ಸೇರಿ ಹೋಗ್ತಾರೆ. ಪೂಜಾರೆಪ್ಪ ಮನೇಲಿ ಇರಲ್ಲ, ಎಲ್ರೂ ಗುಡ್ಡದ ಮ್ಯಾಲಿರೋ ದೇವಸ್ಥಾನದ ಕಡೆಗೆ ಹೋಗ್ತಾರೆ. ಎಂಗೂ ಪೂಜಾರೆಪ್ಪ ದೇವಸ್ಥಾನದಲ್ಲೆ ಇದಾನೆ. ಇವತ್ತು ದೇವರು ಕೇಳಿ ಸೌಭಾಗ್ಯಮ್ಮನ ಕಡೆಯಿಂದ ಹರಕೆ ಕಟ್ಟಿಸಿಬಿಡೋಣಾ...ಇವತ್ತೇ ಅಮಾಸಿ ಚಲೋ ಆತು. ತಡ ಮಾಡೋದು ಬ್ಯಾಡ ಅಂತ ಕಾಳವ್ವನ ಜೊತೆಗೆ ಬಂದ ಊರಿನ ಹಿರಿಯ ಹೆಂಗೆಸರೆಲ್ಲಾ ಮಾತಾಡ್ಕೊಳ್ತಾರೆ. ಇದು ಕಾಳವ್ವನಿಗೂ ಸೌಭಾಗ್ಯಳಿಗೂ ಸರಿ ಅನ್ಸಿ ಮುಖದಲ್ಲಿ ಸಮಾಧಾನದ ಭಾವನೆ ವ್ಯಕ್ತಪಡಿಸುತ್ತಾರೆ. ದೇವಸ್ಥಾನಕ್ಕೆ ಬಂದ ಜನರನ್ನು ನೋಡಿ ಒಂದು ನಿಮಿಷ ಪೂಜಾರೆಪ್ಪನಿಗೆ ಆತಂಕ, ಭಯ ಒಟ್ಟೊಟ್ಟಿಗೆ ಆಗುತ್ತೆ. ಜೊತೆಗೆ ತಂಗಿ ಬೇರೆ ಇದಾಳೆ. ಯಾಕೆ ಏನು ಅಂತ ವಿಚಾರಿಸಿದಾಗ, ಪೂಜಾರೆಪ್ಪನಿಗೆ ಕಸಿವಿಸಿ ಆಗುತ್ತೆ. ಈಗ ದೇವರು ಬಂದು ಮಾತಾಡ್ಲಿಲ್ಲ ಅಂದ್ರೆ ಎಲ್ಲಾ ತಲೆಕೆಳಗಾಗುತ್ತೆ. ಈಗ ದೇವರು ಬಂದು ಮಾತಾಡೊ ತರ ಮಾತಾಡ್ಬೇಕು ಅಂತ ಪೂಜಾರೆಪ್ಪ, 'ನೀನು ಹರಕೆ ಕಟ್ಕೊ. ನೀನು ಬಿದಿರುಮೆಳೆ ಸೇವೆ ಮಾಡೊ ಹರಕೆ ಕಟ್ಕೊ' ಅಂತೇಳಿ ಹೇಳ್ತಾನೆ. ಊರಿನ ಜನ ಎಲ್ಲಾ ಖುಷಿ ಇಂದ ಸೌಭಾಗ್ಯಮ್ಮನ ಕರ್ಕೊಂಡು ಮನೆಗೆ ಬಿಟ್ಟು ಸಂಜೆ ದೇವಸ್ಥಾನಕ್ಕೆ ಬರೋ ತಯಾರಿ ಮಾಡ್ಕೊ ಅಂತೇಳಿ ಮನೆಗೆ ಬಿಟ್ಟು ಹೋಗ್ತಾರೆ.

ಸಂಜೆ ಗುಡ್ಡದ ಮ್ಯಾಲಿರೋ ದೇವಸ್ಥಾನಕ್ಕೆ ಹೋಗೊಕೆ ತಯಾರು ಆಗ್ತಿದ್ದ ತಂಗಿನ ನೋಡಿ ಪೂಜಾರೆಪ್ಪ, ನೀ ದೇವಸ್ಥಾನಕ್ಕೆ ಹೋಗೊದು ಬೇಡ, ಬಿದಿರುಮೆಳೆ ಸೇವೆ ಮಾಡೋದು ಬೇಡ ಅಂತಾನೆ. 'ಹೋದ್ರೆ ನನ್ನ ಹೆಣ ಬೀಳುತ್ತೆ, ಮನೇಲಿರು ಸುಮ್ನೆ' ಅಂತೆಲ್ಲಾ ಹೇಳ್ತಾನೆ. ಆಗ ಇಲ್ಲ ನನ್ನ ಜೀವನ ಸರಿ ಹೋಗ್ಬೇಕು ಅಂದ್ರೆ ನಾ ಈ ಹರಕೆ ತೀರಿಸಾಕಬೇಕು ಅಣ್ಣ. ದಯವಿಟ್ಟು ದೇವಸ್ಥಾನಕ್ಕೆ ಹೋಗಾಕ ಬಿಡು.' ಅಂತ ಅಳೋಕೆ ಶುರು ಮಾಡ್ತಾಳೆ. ಮನೆ ಅಕ್ಕ-ಪಕ್ಕದ ಜನರೆಲ್ಲಾ ಸೇರಿ ಪೂಜಾರೆಪ್ಪನಿಗೆ ಬೈತಾರೆ. 'ತಂಗಿಗೆ ಮಕ್ಕಳಾಗುತ್ತೆ ಅಂದ್ರೆ ನಿಮಗ ಖುಷಿ ಇಲ್ಲಾ... ನೀ ಯಾವ ಸೀಮೆ ಅಣ್ಣ?' ಅಂತೆಲ್ಲಾ ಬೈತಾರೆ. ಆಗ ಪೂಜಾರೆಪ್ಪ ಸುಮ್ನಾಗ್ತಾನೆ. ಎಲ್ರೂ ಮನೆಗೆ ಹೋಗ್ತಾರೆ. ತಂಗಿ, 'ಇವತ್ತು ಯಾಕೋ ನಿನ್ನ ಮನಸ್ಸು ಸರಿ ಇಲ್ಲ ಅಣ್ಣ, ನಾ ಇವತ್ತು ಹೋಗಲ್ಲ. ನಾಳೆ ಹೋಗ್ತಿನಿ' ಅಂತ ಹೇಳಿ ಮಲ್ಗೊಕೆ ಹೋಗ್ತಾಳೆ.

ಬೆಳಕಾಗುತ್ತೆ. ಜನ ಗುಡಿ ಮುಂದ ಸೌಭಾಗ್ಯಮ್ಮನ ಕರ್ಕೊಂಡು ಹೊಕ್ಕಾರ. ಆದ್ರ ಗುಡಿ ಬಾಗ್ಲೇ ತಗೆದಿರಲ್ಲ. ಪೂಜಾರೆಪ್ಪನಿಗೆ ಏನಾತು ಅಂತ ಮನಿಗೆ ಹೋಗ್ತಾರೆ, ಪೂಜಾರೆಪ್ಪ ಮನೆಲಿ ಇರಲ್ಲ. ಊರೆಲ್ಲಾ ಹುಡುಕಾಡ್ತಾರೆ. ಗಾಬರಿಯಾಗುತ್ತೆ ಊರಿನ ಜನಕ್ಕೆಲ್ಲ. ಆದರೆ, ಊರೆಲ್ಲಾ ಹುಡುಕಿದರೂ ಪೂಜಾರೆಪ್ಪನ ಸುಳಿವೇ ಸಿಗಲ್ಲ.

●